## 1

ನಮ್ಮ ಊರಲ್ಲಿ ನಾನೇ ಮೊದಲ ಪದವೀಧರ.

ಆದರೂ ಆ ಓದಿನ ಆಧಾರದ ಮೇಲೆ ಒಂದು ನೌಕರಿ ಪಡೆಯಲಾಗದಿದ್ದರೆ, ಅಪ್ಪ ಅಮ್ಮನಿಗೆ ಆಸರೆ ಆಗಲಾಗದಿದ್ದರೆ ಏನು ಓದಿ ಏನು ಫಾಯಿದೆ. ಸಹಪಾಠಿಗಳು ಒಂದಿಬ್ಬರು ಸಣ್ಣದೋ ದೊಡ್ಡದೋ ಅಂತೂ ನೌಕರಿ ಅಂತ ಹತ್ತಿಕೊಂಡು ದಡ ಸೇರಿದ್ದರು. ಹಾಗೆ ನೋಡಿದರೆ ಅಲ್ಲಿ ಏಗಲಾಗದೆ, ಆಗೀಗ ಬರೆಯುವ ಕವಿತೆಗಳನ್ನು ಕಾರಣವಾಗಿಟ್ಟುಕೊಂಡು ಮತ್ತಷ್ಟು ಎದೆ ಸೆಟೆಸಿಕೊಂಡು ನಡೆಯುತ್ತಿದ್ದ ನಾನು ನಿಜಾರ್ಥದಲ್ಲಿ ಒಬ್ಬ ಪಲಾಯನವಾದಿ.

